# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 137(139) |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-02-2023 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಾವೇರಿ ನದಿಯಿಂದ 24X7 ಅವಧಿಯ ಕುಡಿಯುವ ನೀರು ಪೂರೈಸುವ 'ಅಮೃತ್' ಯೋಜನೆಯ ಅಂದಾಜು ಮೊತ್ತವೆಷ್ಟು; ಎಂದಿನಿಂದ ಚಾಲನೆ ನೀಡಲಾಯಿತು; ಯಾವ ವೇಳೆಗೆ ಪೂರ್ಣಗೊಳಿಸಬೇಕಿತ್ತು; (ವಿವರ ನೀಡುವುದು)</td><td>1. ಅಮೃತ್ ಯೋಜನೆಯಡಿ ಮಂಡ್ಯ ನಗರಕ್ಕೆ 3ನೇ ಹಂತದ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.114.48 ಕೋಟಿಗಳು. ಸದರಿ ಯೋಜನೆಯನ್ನು ಅಕ್ಟೋಬರ್-2016 ರಲ್ಲಿ ಪ್ರಾರಂಭಿಸಲಾಗಿದೆ. ಯೋಜನೆಯನ್ನು ಏಪ್ರಿಲ್-2019ರಲ್ಲಿ ಪೂರ್ಣಗೊಳಿಸಬೇಕಿತ್ತು. ಯೋಜನೆಯನ್ನು ಫೆಬ್ರುವರಿ-2022ರಲ್ಲಿ ಪೂರ್ಣಗೊಳಿಸಲಾಗಿದೆ.<br><br>2. ಅಮೃತ್ ಯೋಜನೆಯ ಹೆಚ್ಚುವರಿ ಅನುದಾನದಡಿ ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ವಿತರಣಾ ಜಾಲ ಅಭಿವೃದ್ಧಿಪಡಿಸುವ ಯೋಜನೆಯ ಅಂದಾಜು ಮೊತ್ತ ರೂ.8.92 ಕೋಟಿಗಳು. ಸದರಿ ಯೋಜನೆಯನ್ನು ಸೆಪ್ಟಂಬರ್–2018ರಲ್ಲಿ ಪ್ರಾರಂಭಿಸಲಾಗಿದೆ, ಯೋಜನೆಯನ್ನು ಸೆಪ್ಟಂಬರ್-2019ರಲ್ಲಿ ಪೂರ್ಣಗೊಳಿಸಬೇಕಿತ್ತು, ಡಿಸೆಂಬರ್-2019ರಲ್ಲಿ ಪೂರ್ಣಗೊಳಿಸಲಾಗಿದೆ.</td></tr>
<tr><td>ಆ)</td><td>ಸದರಿ ಯೋಜನೆಗೆ ಈವರೆವಿಗೂ ವೆಚ್ಚವಾದ ಹಣ ಎಷ್ಟು; ಪೂರ್ಣಗೊಳಿಸಲು ಎಷ್ಟು ಹಣದ ಅವಶ್ಯಕವಿದೆ; ಈವರೆವಿಗೂ ಆಗಿರುವ ಕೆಲಸಗಳೇನು; ಆಗಬೇಕಾಗಿರುವ ಕೆಲಸಗಳೇನು: (ಸಂಪೂರ್ಣ ವಿವರ ನೀಡುವುದು)</td><td>(ರೂ. ಕೋಟಿಗಳಲ್ಲಿ)<table><tr><th>ಕ್ರ. ಸಂ</th><th>ಯೋಜನೆಯ ಹೆಸರು</th><th>ವೆಚ್ಚ (ಜನವರಿ-2023)</th><th>ಪೂರ್ಣಗೊಳಿಸಲು ಅವಶ್ಯವಿರುವ ಹಣ</th></tr><tr><td>1</td><td>ಮಂಡ್ಯ ನಗರಕ್ಕೆ 3ನೇ ಹಂತದ ನೀರು ಸರಬರಾಜು</td><td>116.99</td><td>27.15</td></tr><tr><td>2</td><td>ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ವಿತರಣಾ ಜಾಲ ಅಭಿವೃದ್ಧಿಪಡಿಸುವ ಕಾಮಗಾರಿ</td><td>7.49</td><td>1.16</td></tr></table>ಮೇಲಿನ ಯೋಜನೆಗಳಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿವರಗಳನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಇ)</td><td>ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; ನಿಗಧಿತ ಅವಧಿಯೊಳಗೆ ಪೂರ್ಣಗೊಳ್ಳದೇ ವಿಳಂಬ ಆಗಿರುವುದಕ್ಕೆ ಕಾರಣಗಳೇನು: ಯಾವ ವೇಳೆಗೆ ಪೂರ್ಣ ಗೊಳಿಸಲಾಗುವುದು: (ವಿವರ ನೀಡುವುದು)</td><td>ಅಮೃತ್ ಯೋಜನೆಯಡಿ ಮಂಡ್ಯ ನಗರಕ್ಕೆ 3ನೇ ಹಂತದ ನೀರು ಸರಬರಾಜು ಯೋಜನೆಯನ್ನು ದಿನಾಂಕ:08-02-2022ರಲ್ಲಿ ಪೂರ್ಣಗೊಂಡಿದ್ದು, ಸದರಿ ಯೋಜನೆಯಿಂದ ಮಂಡ್ಯ ನಗರಕ್ಕೆ ದಿನಂಪ್ರತಿ 32 ದಶಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ.<br><br>ಸದರಿ ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿರುತ್ತದೆ.<br><br>1. ರಾಷ್ಟ್ರೀಯ ಹೆದ್ದಾರಿ ವತಿಯಿಂದ ಕೊಳವೆ ಮಾರ್ಗ ಅಳವಡಿಸಲು ಅನುಮತಿ ನೀಡಲು ವಿಳಂಬವಾಗಿರುವುದು.<br><br>2. ಮಂಡ್ಯ ನಗರದ ವಿವಿಧ ಬಡಾವಣೆಗಳಲ್ಲಿ 5.00 ಲ.ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸಲು ನಗರ</td></tr>
</table>

<table>
<tr><td></td><td></td><td>ಸಭೆಯಿಂದ ಜಾಗ ಹಸ್ತಾಂತರಿಸಲು ವಿಳಂಬವಾಗಿರುವುದು.<br><br>3. ರೈಲ್ವೆ ಇಲಾಖೆಯಿಂದ ಕೊಳವೆ ಮಾರ್ಗ ಅಳವಡಿಸಲು ಅನುಮತಿ ನೀಡುವಲ್ಲಿ ವಿಳಂಬವಾಗಿರುವುದು.<br><br>4. ಕೋವಿಡ್-19 ಲಾಕ್‌ಡೌನ್‌ನಿಂದಾಗಿ ಕಾಮಗಾರಿ ಪ್ರಗತಿಯಲ್ಲಿ ಕುಂಠಿತವಾಗಿರುವುದು.<br><br>ಅಮೃತ್ ಯೋಜನೆಯ ಹೆಚ್ಚುವರಿ ಅನುದಾನದಡಿ ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ವಿತರಣಾ ಜಾಲ ಅಭಿವೃದ್ಧಿಪಡಿಸುವ ಯೋಜನೆಯು ದಿನಾಂಕ:27-12.2019ರಲ್ಲಿ ಪೂರ್ಣಗೊಂಡಿದ್ದು, ಸದರಿ ವಿತರಣಾ ವ್ಯವಸ್ಥೆಯ ಮುಖಾಂತರ ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಸದರಿ ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿರುತ್ತದೆ.<br><br>1. ಬೀಡಿ ಕಾರ್ಮಿಕರ ಕಾಲೋನಿಯಲ್ಲಿ ಮೇಲ್ಮಟ್ಟ ಜಲಸಂಗ್ರಹಾಗಾರ ನಿರ್ಮಿಸಲು ಉದ್ದೇಶಿಸಿದ್ದು, ಅವಶ್ಯಕ ಎಸ್.ಬಿ.ಸಿ. ದೊರೆಯದಿದ್ದರಿಂದ ಮೇಲ್ಮಟ್ಟ ಜಲಸಂಗ್ರಹಾಗಾರ ನಿರ್ಮಿಸಲು ನಗರಸಭೆ ಬದಲಿ ಸ್ಥಳ ಹಸ್ತಾಂತರಗೊಳಿಸುವಲ್ಲಿ ವಿಳಂಬವಾಗಿರುವುದು.<br><br>2. ಕೊಳವೆ ಮಾರ್ಗ ಅಳವಡಿಸಲು ಷುಗರ್ ಟೌನ್ ನಿವಾಸಿಗಳಿಂದ ವಿರೋಧ ವ್ಯಕ್ತಪಡಿಸಿದಾಗ ಸಾರ್ವಜನಿಕರ ಮನವೊಲಿಸಿ ಕೊಳವೆ ಮಾರ್ಗ ಅಳವಡಿಸುವುದು ವಿಳಂಬವಾಗಿರುವುದು.</td></tr>
<tr><td>ಈ)</td><td>ಮಂಡ್ಯ ನಗರದ ಎಷ್ಟು ವಾರ್ಡ್‌ಗಳು, ಬಡಾವಣೆಗಳು ಹಾಗೂ ಗ್ರಾಮಗಳು ಈ ಯೋಜನೆಯ ಪ್ರಯೋಜನ ಪಡೆಯಲಿವೆ; (ವಿವರ ನೀಡುವುದು)</td><td>ಮಂಡ್ಯ ನಗರದ ಎಲ್ಲಾ 35 ವಾರ್ಡ್‌ಗಳು ಹಾಗೂ ಮಂಡ್ಯ ಸುತ್ತಮುತ್ತಲಿನ 20 ಹಳ್ಳಿಗಳನ್ನು ಮತ್ತು ರಾಗಿಮುದ್ದನಹಳ್ಳಿಯಿಂದ ಮಂಡ್ಯದವರೆಗೆ ಮಾರ್ಗ ಮಧ್ಯ ಬರುವ 12 ಹಳ್ಳಿಗಳ ಬೇಡಿಕೆಯನ್ನು ಪರಿಗಣಿಸಿ ಯೋಜನೆಯನ್ನು ವಿನ್ಯಾಸಿಸಲಾಗಿದೆ. ಪ್ರಸ್ತುತ ಮಂಡ್ಯ ನಗರದ ಎಲ್ಲಾ 35 ವಾರ್ಡ್‌ಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ.</td></tr>
<tr><td>ಉ)</td><td>ಈ ಯೋಜನೆ ಪೂರ್ಣಗೊಂಡ ನಂತರ ಪ್ರತಿದಿನಕ್ಕೆ ಬೇಕಾಗುವ ಅಂದಾಜು ನೀರಿನ ಪ್ರಮಾಣದ ಬೇಡಿಕೆ ಎಷ್ಟು?</td><td>ಸದರಿ ಯೋಜನೆಯನ್ನು ಈ ಕೆಳಕಂಡ ಸಾಮರ್ಥ್ಯಕ್ಕೆ ವಿನ್ಯಾಸಿಸಲಾಗಿದೆ.<br><table>
<tr><th rowspan="2">ವರ್ಷ</th><th colspan="3">ಬೇಡಿಕೆ (ಎಂ.ಎಲ್.ಡಿ)</th></tr>
<tr><th>ಮಂಡ್ಯ ನಗರ</th><th>ಮಾರ್ಗ ಮಧ್ಯದ ಹಳ್ಳಿಗಳು</th><th>ಒಟ್ಟು</th></tr>
<tr><td>2016</td><td>35.00</td><td>8.00</td><td>43.00</td></tr>
<tr><td>2031</td><td>41.00</td><td>10.00</td><td>51.00</td></tr>
<tr><td>2046</td><td>56.00</td><td>23.00</td><td>79.00</td></tr>
</table><br>ಪ್ರಸ್ತುತ, ಮಂಡ್ಯ ನಗರಕ್ಕೆ 32.00 ಎಂ.ಎಲ್.ಡಿ. ನೀರನ್ನು ಸರಬರಾಜು ಮಾಡಲಾಗುತ್ತಿದೆ.</td></tr>
</table>

ಸಂಖ್ಯೆ:ನಅಇ 17 ಸಿಎಸ್‌ಎಸ್ 2023

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

## ಅನುಬಂಧ-1

| ಕ್ರ.ಸಂ | ಯೋಜನೆಯ ಹೆಸರು | | ಕಾಮಗಾರಿವಾರು ವಿವರಗಳು |
|---|---|---|---|
| | | | ಆಗಿರುವ ಕಾಮಗಾರಿಗಳ ವಿವರಗಳು |
| I | ಮಂಡ್ಯ ನಗರಕ್ಕೆ 3ನೇ ಹಂತದ ನೀರು ಸರಬರಾಜು | 1 | ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿ ಪಾತ್ರದಲ್ಲಿ ಮೂಲಸ್ಥಾವರ ನಿರ್ಮಿಸುವುದು. |
| | | 2 | ಮೂಲಸ್ಥಾವರದಲ್ಲಿ 1100 ಹೆಚ್‌ಪಿ 03 ಸಂಖ್ಯೆ ಡಿ.ಡಬ್ಲ್ಯೂ.ವಿ.ಟಿ. ರೇಚಕ ಯಂತ್ರಗಳನ್ನು ಒದಗಿಸಿ, ಅಳವಡಿಸಿ, ಚಾಲನಗೊಳಿಸುವುದು. |
| | | 3 | ಮೂಲಸ್ಥಾವರದಿಂದ ರಾಗಿಮುದ್ದನಹಳ್ಳಿ ಹತ್ತಿರದ ಜಲಶುದ್ಧೀಕರಣ ಘಟಕದವರೆಗೆ 1016 ಮಿ.ಮೀ ವ್ಯಾಸದ 12.63 ಕಿ.ಮೀ ಉದ್ದದ ಮೃದು ಕಬ್ಬಿಣದ ಏರು ಕೊಳವೆ ಮಾರ್ಗವನ್ನು ಅಳವಡಿಸುವುದು. |
| | | 4 | ರಾಗಿಮುದ್ದನಹಳ್ಳಿ ಹತ್ತಿರ 51 ದಶಲಕ್ಷ ಲೀಟರ್ ಸಾಮರ್ಥ್ಯದ ಜಲಶುದ್ಧೀಕರಣ ಘಟಕ ನಿರ್ಮಿಸುವುದು. |
| | | 5 | ಜಲಶುದ್ಧೀಕರಣ ಘಟಕದಿಂದ ಮಂಡ್ಯ ನಗರದವರೆಗೆ 1016 ಮಿ.ಮೀ ವ್ಯಾಸದ 10.50 ಕಿ.ಮೀ ಉದ್ದದ ಮೃದು ಕಬ್ಬಿಣದ ಗುರುತ್ವಾಕರ್ಷಕ ಕೊಳವೆ ಮಾರ್ಗವನ್ನು ಅಳವಡಿಸುವುದು. |
| | | 6 | ಮಂಡ್ಯ ನಗರದಲ್ಲಿ ವಿವಿಧ ಮೇಲ್ಮಟ್ಟ ಜಲಸಂಗ್ರಹಾಗಾರಗಳವರೆಗೆ 150 ಮಿ.ಮೀ. ನಿಂದ 559 ಮಿ.ಮೀ. ವ್ಯಾಸದವರೆಗೆ ಡಿ.ಐ/ಎಂ.ಎಸ್. 22.30 ಕಿ.ಮೀ ಉದ್ದದ ಫೀಡರ್ ಕೊಳವೆ ಮಾರ್ಗವನ್ನು ಅಳವಡಿಸುವುದು |
| | | 7 | 5.00 ಲಕ್ಷ ಲೀಟರ್ ಸಾಮರ್ಥ್ಯದ 9 ಸಂಖ್ಯೆ ಮೇಲ್ಮಟ್ಟದ ಜಲ ಸಂಗ್ರಹಗಾರಗಳನ್ನು<br>ಬಾಲಭವನ - (ಡಿಎಂಎ - 9)<br>ತಾವರಗೆರೆ (ಡಿಎಂಎ -14) ,<br>ಶುಗರ್ ಟೌನ್ (ಡಿಎಂಎ -20),<br>ಗಾಂಧಿನಗರ (ಡಿಎಂಎ - 9),<br>ಸ್ವರ್ಣಸಂದ್ರ (ಡಿಎಂಎ -22),<br>ಕಲ್ಲಹಳ್ಳಿ (ಡಿಎಂಎ - 3),<br>ಪೊಲೀಸ್ ಕ್ವಾಟ್ರಸ್ (ಡಿಎಂಎ - 5),<br>ಹಳೇ ಗುತ್ತಲು (ಡಿಎಂಎ - 17),<br>ಗಾಂಧಿನಗರ (ಡಿಎಂಎ - 9) ಹಾಗೂ<br>10.00 ಲಕ್ಷ ಲೀಟರ್ ಸಾಮರ್ಥ್ಯದ 1 ಸಂಖ್ಯೆಯ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ಹಳೇ ತಾಲ್ಲೂಕು ಕಛೇರಿಯ ಬಳಿ (ಡಿಎಂಎ -2) ನಿರ್ಮಿಸುವುದು. |
| | | 8 | ಮಂಡ್ಯ ನಗರದ 23 DMA ಗಳ ಪೈಕಿ DMA -3,17,18,21 & 22 ರಲ್ಲಿ 75 ಮಿ.ಮೀ.ನಿಂದ 250 ಮಿ.ಮೀ. ವ್ಯಾಸದವರೆಗೆ 61 ಕಿ.ಮೀ ಉದ್ದದ ಹೆಚ್.ಡಿ.ಪಿ.ಇ. ವಿತರಣಾ ಕೊಳವೆಮಾರ್ಗವನ್ನು ಅಳವಡಿಸುವುದು. |
| | | 9 | ಹಾಲಿ ವಿತರಣಾ ವ್ಯವಸ್ಥೆಯಲ್ಲಿ ಕೊಳವೆ ಮಾರ್ಗ ಇಲ್ಲದ ಕಡೆ 7.81 ಕಿ.ಮೀ ಉದ್ದದ ಪಿ.ವಿ.ಸಿ. ಕೊಳವೆ ಮಾರ್ಗವನ್ನು ಅಳವಡಿಸುವುದು. |
| | | 10 | ಹಾಲಿ ಗೃಹಸಂಪರ್ಕಗಳಿಗೆ ನೀರಿನ ಮೀಟರ್ ಮತ್ತು ಹೊಸದಾಗಿ ಗೃಹಸಂಪರ್ಕ ಕಲ್ಪಿಸಿ ಮೀಟರ್ ಅಳವಡಿಸುವುದು. |
| II | ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ವಿತರಣಾ ಜಾಲ ಅಭಿವೃದ್ಧಿಪಡಿಸುವ ಕಾಮಗಾರಿ | 1 | 10.00 ಲಕ್ಷ ಲೀಟರ್ ಸಾಮರ್ಥ್ಯದ 1 ಸಂಖ್ಯೆ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ಹಳೇ ತಾಲ್ಲೂಕು ಕಛೇರಿಯ ಬಳಿ (ಡಿಎಂಎ -2) ನಿರ್ಮಿಸುವುದು. |
| | | 2 | ಮಂಡ್ಯ ನಗರದ 23 DMA ಗಳ ಪೈಕಿ DMA-14 & 20 ರಲ್ಲಿ 75 ಮಿ.ಮೀ.ನಿಂದ 250 ಮಿ.ಮೀ. ವ್ಯಾಸದವರೆಗೆ 25.17 ಕಿ.ಮೀ ಉದ್ದದ ಹೆಚ್.ಡಿ.ಪಿ.ಇ. ವಿತರಣಾ ಕೊಳವೆಮಾರ್ಗವನ್ನು ಅಳವಡಿಸುವುದು. |
| | | 3 | 4450 ಸಂಖ್ಯೆ ಗೃಹಸಂಪರ್ಕಗಳನ್ನು ಕಲ್ಪಿಸುವುದು. |

01/02/23

ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಮೈಸೂರು

Scanned with OKEN Scanner